# ಶ್ರೀರಾಮಕೃಷ್ಣ ಶಾರದಾಶ್ರಮ,

## ಪೊನ್ನಂಪೇಟೆ – 571216, ಕೊಡಗು ಜಿಲ್ಲೆ

### (ಪ್ರಕೃತಿಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿ ವಿಭಾಗ)

Phone : 08274-249040, 249555; Website: rkmponnampet.org

Email: ponnampet@rkmm.org, srkseva@gmail.com

ಆತ್ಮೀಯರೇ,

## ಒಂದು ವಿಜ್ಞಾಪನೆ

1927 ರಲ್ಲಿ ಆರಂಭವಾದ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮವು 2010 ರಲ್ಲಿ **ಪ್ರಕೃತಿಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿ ವಿಭಾಗ**ವನ್ನು ಆರಂಭಿಸಿದ್ದು, ಅಂದಿನಿಂದ ಇಲ್ಲಿಯವರೆಗೆ ಅನೇಕ ಸೇವಾ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ:

- ಹೈಡ್ರೋಥೆರಪಿ, ಯೋಗ ಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಕಟಿಸ್ನಾನ, ಜಲನೇತಿ, ಪಥ್ಯಚಿಕಿತ್ಸೆ, ಅಕ್ಯುಪಂಕ್ಚರ್, ಮಸಾಜ್ ಮೊದಲಾದ ಸೇವೆಗಳು.
- ಪ್ರಕೃತಿ ಚಿಕಿತ್ಸಾವಿಧಾನ, ಯೋಗ ಕುರಿತಂತೆ ಜನಸಾಮಾನ್ಯರಿಗೆ ಅರಿವು ಮೂಡಿಸುವ ಕಾರ್ಯದ ಅಂಗವಾಗಿ ವಿವಿಧ ತರಬೇತಿ ಶಿಬಿರಗಳು.
- ಉಚಿತ ಚಿಕಿತ್ಸಾ ಕ್ಯಾಂಪ್‌ಗಳು, ನುರಿತ ವೈದ್ಯರಿಂದ ಭಾಷಣಗಳು.
- ವಿದ್ಯಾರ್ಥಿಗಳಿಗೆ ವಿಶೇಷ ಯೋಗ ಶಿಬಿರ, ಸಾರ್ವಜನಿಕರಿಗಾಗಿ ಸಮಗ್ರ ಆರೋಗ್ಯ ಹಾಗೂ ಯೋಗ ಶಿಬಿರ.

ಈವರೆಗೆ ಸುಮಾರು 3000 ಮಂದಿ ಈ ಸೇವೆಗಳ ಲಾಭ ಪಡೆದಿರುತ್ತಾರೆ. ದೈಹಿಕ ಮಾಲಿನ್ಯ ನಿರ್ಮೂಲನ, ದೈಹಿಕ-ಮಾನಸಿಕ ಪುನಶ್ಚೇತನ, ಪ್ರಾಣಶಕ್ತಿಯ ಸುಗಮ ಸಂಚಲನದಿಂದ ನಾಡಿಯ ಶುದ್ಧೀಕರಣ – ಈ ಪದ್ಧತಿಗಳ ಮೂಲಕ ಔಷಧಿರಹಿತ ಆರೋಗ್ಯ ಚಿಕಿತ್ಸೆಯೇ 'ಪ್ರಕೃತಿ ಚಿಕಿತ್ಸೆ'ಯ ತತ್ತ್ವ ಹಾಗೂ ವಿಧಾನವಾಗಿದೆ.






ವೃದ್ಧಿಗೊಳ್ಳುತ್ತಿರುವ ರೋಗಿಗಳ ಹಾಗೂ ಶಿಬಿರಾರ್ಥಿಗಳ ಆವಶ್ಯಕತೆಗಳನ್ನು ಮನಗಂಡು ಈ ವಿಭಾಗಕ್ಕೆ ಒಂದು ಹೊಸ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಫಿಸಿಯೋಥೆರಪಿ, ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಕೇಂದ್ರದ ಚಟುವಟಿಕೆಗಳಿಗೆ ಯೋಗ್ಯ ಸ್ಥಳಾವಕಾಶವನ್ನು ಒದಗಿಸುವ ಈ ಕಟ್ಟಡದ ನಿರ್ಮಾಣಕ್ಕೆ ಸುಮಾರು 78 ಲಕ್ಷ ರೂ. ತಗಲುವುದಾಗಿ ಅಂದಾಜಿಸಲಾಗಿದೆ. *(ರೋಗಿಗಳಿಗಾಗಿ ಪೀಠೋಪಕರಣಗಳು, ಔಷಧಿ ಸಲಕರಣೆಗಳು ಇತ್ಯಾದಿಗಳ ವೆಚ್ಚ ಸೇರಿ.)* ಈ ಕಾರ್ಯಕ್ಕೆ ಭಕ್ತರು, ಹಿತೈಷಿಗಳು ಹಾಗೂ ಸಂಘಸಂಸ್ಥೆಗಳು ಉದಾರ ಆರ್ಥಿಕ ನೆರವು ನೀಡಬೇಕೆಂದು ನಾವು ವಿನಂತಿಸಿಕೊಳ್ಳುತ್ತಿದ್ದೇವೆ.

ಪ್ರೀತಿ ಮತ್ತು ಶುಭಾಶಯಗಳೊಂದಿಗೆ,
**ಭಗವತ್ಸೇವೆಯಲ್ಲಿ ತಮ್ಮವ**
**ಸ್ವಾಮಿ ಬೋಧಸ್ವರೂಪಾನಂದ**
ಅಧ್ಯಕ್ಷರು

ಆಶ್ರಮಕ್ಕೆ ನೀಡುವ ದೇಣಿಗೆಗಳು 1961ರ **ಆದಾಯ ತೆರಿಗೆ ನಿಯಮದ** ಪ್ರಕಾರ ತೆರಿಗೆ ಕಾನೂನು ವಿನಾಯಿತಿ ಕಾನೂನಿನ ಸೆಕ್ಷನ್ **80G** ಅನ್ವಯ ವಿನಾಯಿತಿಗೆ ಅರ್ಹವಾಗಿರುತ್ತವೆ.

RTGS **ಗಾಗಿ ಬ್ಯಾಂಕ್ ವಿವರಗಳು:** Sri Ramakrishna Sharadashrama, Ponnampet.
SB. A/c.no.003200101001813. IFSC Code : CORP0000032
**(ಹಾಗೂ, ಪತ್ರ ಅಥವಾ ಇಮೇಲ್ ಮೂಲಕ ವಿವರಗಳನ್ನು ತಿಳಿಸಿರಿ.)**



ಸಂಪಾದಕೀಯ

# 'ತೀರ್ಥೀಕುರ್ವಂತಿ ತೀರ್ಥಾನಿ'

''ಎತ್ತ ಹೊರಟಿದ್ದೀರಿ? ಪ್ರವಾಸವೆ ?''

''ಇಲ್ಲ – ಯಾತ್ರೆ.''

''ಕಾಶೀಯಾತ್ರೆಯೆ? ಅಥವಾ – ''

''ಚಾರ್‌ಧಾಮ್ ಯಾತ್ರೆ – ಗಂಗೋತ್ರಿ, ಯಮುನೋತ್ರಿ, ಕೇದಾರ, ಬದರಿ. ಬಹಳ ದಿನಗಳ ಹಾರೈಕೆ ಈಗ ಈಡೇರಿದೆ.''

''ಎಷ್ಟು ದಿನ ಯಾತ್ರೆ ? .. ''

''ಇಪ್ಪತ್ತು ದಿನ. ನೋಡಿ, ಟ್ರೈನ್ ಬಂದೇಬಿಟ್ಟಿತು ..''

– ಇಂಥ ಸಂಭಾಷಣೆಗಳನ್ನು ಅಲ್ಲಲ್ಲಿ ಕೇಳುತ್ತೇವೆ. ಪ್ರವಾಸಕ್ಕೂ ಯಾತ್ರೆಗೂ ಇರುವ ವ್ಯತ್ಯಾಸ ನಮ್ಮಲ್ಲಿ ತುಂಬ ಸಹಜವಾಗಿದೆ; ಎರಡರ ಹಿಂದಿನ ಉದ್ದೇಶವೂ ಸ್ಪಷ್ಟವಾಗಿದೆ. ಒಂದು ಲೌಕಿಕ ಆನಂದಕ್ಕಾಗಿ, ಜೀವನದ ಏಕತಾನತೆಯನ್ನು ಹೋಗಲಾಡಿಸುವ 'ಬದಲಾವಣೆ'ಗಾಗಿ. ಇನ್ನೊಂದು ಪಾರಮಾರ್ಥಿಕ ಉನ್ನತಿಗಾಗಿ, ಆಧ್ಯಾತ್ಮಿಕ ಸ್ಫೂರ್ತಿಗಾಗಿ.

## ಸಾಂಪ್ರದಾಯಿಕ ಹಿನ್ನೆಲೆ

ತೀರ್ಥಯಾತ್ರೆ ಮಾಡುವ ಪದ್ಧತಿ ಎಂದು ಹುಟ್ಟಿಕೊಂಡಿತು? ತೀರ್ಥಕ್ಷೇತ್ರಗಳ ಮಹತ್ವ ಯಾವ ಕಾಲಘಟ್ಟದಲ್ಲಿ ರೂಪುಗೊಂಡಿತು? – ಇದಕ್ಕೆ ಉತ್ತರ ಹೇಳಲು ನಮ್ಮಲ್ಲಿ ಖಚಿತ ಐತಿಹಾಸಿಕ ದಾಖಲೆಗಳಿಲ್ಲ. '**ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ । ಪುರೀ ದ್ವಾರಾವತೀ ಚೈವ ಸಪ್ತೈತೇ ಮೋಕ್ಷದಾಯಕಾಃ**' ಎಂಬ ಶ್ಲೋಕವೊಂದು ಏಳು ಪುಣ್ಯಧಾಮಗಳ ಮಹತ್ವವನ್ನು ಸೂಚಿಸುತ್ತದೆ. ಅದೇ ರೀತಿ ದ್ವಾದಶ ಜ್ಯೋತಿರ್ಲಿಂಗಗಳು, ಚತುರ್ಧಾಮಗಳು, ೫೨ ಶಕ್ತಿಪೀಠಗಳು – ಇವೆಲ್ಲ ಯಾತ್ರಾಸ್ಥಳಗಳಾಗಿ ಪ್ರಸಿದ್ಧಿಯಾಗಿವೆ. ಪ್ರತಿಯೊಂದು ಕ್ಷೇತ್ರದ ಹಿಂದೆಯೂ ಒಂದೊಂದು ಪೌರಾಣಿಕ ಕಥೆಯಿದೆ, ಸ್ಥಳಮಹಾತ್ಮೆಯಿದೆ. ಒಂದಲ್ಲ ಒಂದು ದೇವತೆಯೊಂದಿಗೆ, ಋಷಿಮುನಿಗಳೊಂದಿಗೆ ಅಥವಾ ಆಧ್ಯಾತ್ಮಿಕ ಮಹಾಪುರುಷರ ಜೊತೆಗೆ ಈ ಸ್ಥಳಗಳು ಸಂಬಂಧ ಕಲ್ಪಿಸುತ್ತವೆ. ಇವುಗಳಲ್ಲಿ ಅನೇಕ ಕಥೆಗಳು ಐತಿಹಾಸಿಕವಾಗಿ ನಿಜವೆಂದು ಪ್ರಮಾಣೀಕರಿಸಲ್ಪಡದಿದ್ದರೂ, ಶ್ರದ್ಧಾಳುಗಳ ಪಾಲಿಗೆ ಅವು ವಿಶೇಷ ಮಹತ್ವ ಹೊಂದಿರುತ್ತವೆ. ಇನ್ನು ಕೆಲವಡೆ ಐತಿಹಾಸಿಕ ದಾಖಲೆಗಳಿಂದ ನಿಜವೆಂದು ಪ್ರಮಾಣಿತವಾದ ಘಟನೆಗಳೂ ಈ ತೀರ್ಥಕ್ಷೇತ್ರಗಳ ಪ್ರಸಿದ್ಧಿಗೆ ಹಿನ್ನೆಲೆಯಾಗಿರುತ್ತವೆ. ಆದರೆ ಭಾರತದಲ್ಲಿ ಐತಿಹಾಸಿಕ ಸತ್ಯಾಸತ್ಯತೆಗಳಿಗಿಂತ ಭಕ್ತರ, ಯಾತ್ರಾರ್ಥಿಗಳ ಶ್ರದ್ಧೆ, ನಂಬಿಕೆ ವಿಶ್ವಾಸಕ್ಕೇ ಮಹತ್ವ ಹೆಚ್ಚು. ಅವರ ದೈವೀ ಶ್ರದ್ಧೆಯನ್ನು ಅವು ಬಲಗೊಳಿಸುವಂತೆ ಸ್ಫೂರ್ತಿ ತುಂಬಿದರೆ ಸಾಕು.

ಪ್ರಾಚೀನ ಕಾಲದಲ್ಲಿ ಪವಿತ್ರ ಯಾತ್ರಾಸ್ಥಳಗಳಿಗೆ ತೀರ್ಥಮಾಡಿದ ಕಥೆಗಳು ಹಲವೆಡೆ ಉಲ್ಲೇಖಗೊಂಡಿವೆ. ರಾಮಾಯಣ, ಮಹಾಭಾರತ, ಪುರಾಣಗಳಲ್ಲಿ ತೀರ್ಥಯಾತ್ರೆ ಮಾಡಿದ ಹಲವು ಕಥೆಗಳು ಬರುತ್ತವೆ. ಸಾಮಾನ್ಯವಾಗಿ ಆಯಾ ತೀರ್ಥಕ್ಷೇತ್ರದ ಸ್ಥಳ ಪುರಾಣ, ಅಲ್ಲಿನ ಮಹಿಮೆ, ಅಲ್ಲಿ ಮಾಡಬೇಕಾದ ಪೂಜೆ, ವ್ರತಗಳೇ ಮೊದಲಾದ ವಿಧಿವಿಧಾನಗಳು, ಪ್ರಸ್ತುತ ವ್ಯಕ್ತಿ ಅವುಗಳನ್ನು ನೆರವೇರಿಸಿ ತನ್ನ ಇಷ್ಟಾರ್ಥವನ್ನು ಈಡೇರಿಸಿಕೊಂಡ ಬಗೆ – ಇವನ್ನೆಲ್ಲ ಅಲ್ಲಿ ವಿಸ್ತಾರವಾಗಿ ವರ್ಣಿಸಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ನೈಸರ್ಗಿಕ ಸೌಂದರ್ಯದಿಂದ ತುಂಬಿ ತುಳುಕುವ ಸ್ಥಳದಲ್ಲೇ ಅನೇಕ ತೀರ್ಥಕ್ಷೇತ್ರಗಳಿರುವುದನ್ನು ನಾವು ಗಮನಿಸಬಹುದು. ಹಿಂದೂಗಳ ಪಾಲಿಗೆ ಪ್ರವಾಸವೆಂದು ಬೇರೆ ಬಗೆಯ ಒಂದು ಪರಿಪಾಠವಿಲ್ಲ; ತೀರ್ಥಯಾತ್ರೆಯೊಂದಿಗೇ ವಿವಿಧ ಪ್ರದೇಶಗಳ ಅನುಭವಗಳನ್ನು ಮಾಡಿಕೊಳ್ಳುವುದುದು, ಪ್ರವಾಸದ ಸುಖವನ್ನು ಹೊಂದುವುದು ನಡೆದುಹೋಗುತ್ತದೆ. ನದಿ, ಪರ್ವತ, ಬಿಸಿನೀರಿನ ಬುಗ್ಗೆ, ನದಿಗಳ ಸಂಗಮ, ಇವೆಲ್ಲ ನಮ್ಮಲ್ಲಿ 'ತೀರ್ಥ'ಗಳು. *(ಅನೇಕ ಕಡೆ ಅಕ್ಷರಶಃ 'ತೀರ್ಥ' ಉದ್ಭವವಾಗುವುದೂ ಉಂಟು. ಅಲ್ಲಿ ಒಂದೋ ಪುಣ್ಯನದಿಗಳ ಉಗಮವಾಗುವುದು, ಅಥವಾ ಔಷಧೀಯ ಗುಣಗಳಿಂದ ಕೂಡಿದ ನೀರು ಹುಟ್ಟಿ ಬರುವುದು)* ಇದರೊಂದಿಗೆ ಪ್ರಾಚೀನ ಕಥೆಗಳೂ, ದಿವ್ಯ ವ್ಯಕ್ತಿಗಳ ಚರಿತ್ರೆಯೂ ಸೇರಿಕೊಂಡು, ಇಂಥ ಕ್ಷೇತ್ರಗಳ ದರ್ಶನ ಅತ್ಯಂತ ಪವಿತ್ರವೆಂದು ಪರಿಗಣಿಸಲ್ಪಡುತ್ತದೆ. ಹಿಮಾಲಯ ಪರ್ವತಮಾಲೆಯಿಡೀ ಪವಿತ್ರ ಸ್ಥಳವೆಂದೂ, ಅಲ್ಲೆಲ್ಲ ಪ್ರಾಚೀನ ಋಷಿಮುನಿಗಳು ಅನಾದಿಕಾಲದಿಂದ



ತಪಸ್ಸು ಮಾಡಿದ್ದರಿಂದ ಈ ಪರ್ವತಸಾಲಿನುದ್ದಗಲಕ್ಕೂ ಆಧ್ಯಾತ್ಮಿಕ ತರಂಗಗಳು ಸದಾ ಅನುರಣಿಸುತ್ತಿದೆಯೆಂದು ಹಲವರು ನಂಬುತ್ತಾರೆ. ಹಿಮಾಲಯದ ಉದ್ದಕ್ಕೂ ಅತ್ಯಂತ ಪ್ರಸಿದ್ಧ ತೀರ್ಥಕ್ಷೇತ್ರಗಳಿವೆ; ದುರ್ಗಮ ದಾರಿಗಳಿಂದ ಕೂಡಿದ ಪ್ರದೇಶಗಳಲ್ಲೂ ಹಲವು ಪವಿತ್ರಸ್ಥಳಗಳಿವೆ. ಭಾರತದ ಎಲ್ಲೆಡೆಗಳಿಂದ ಪ್ರತಿವರ್ಷವೂ ಜನ ಅಲ್ಲಿಗೆ ಯಾತ್ರೆ ಹೋಗುತ್ತಾರೆ – ಎಷ್ಟೇ ದುರ್ಗಮವಾಗಿರಲಿ, ಎಷ್ಟೇ ಖರ್ಚುವೆಚ್ಚಗಳಾಗಲಿ.

ಕೈಲಾಸ ಪರ್ವತ, ಅಮರನಾಥ, ಮುಕ್ತಿನಾಥ (ನೇಪಾಳ), ನಾಲ್ಕು ಧಾಮಗಳು – ಇವೆಲ್ಲ ಹಿಮಾಲಯದಲ್ಲೇ ಇವೆ. ಹಿಮಾಲಯಕ್ಕೂ ಆಧ್ಯಾತ್ಮಿಕತೆಗೂ ಉಂಟಾದ ಅವಿನಾಭಾವ ಸಂಬಂಧ ಎಷ್ಟು ಪ್ರಾಚೀನವೋ! ವೇದಗಳಲ್ಲಿ 'ಸಪ್ತಸಿಂಧು' ವೆಂದು ವರ್ಣಿಸಲಾಗಿರುವ ಪವಿತ್ರನದಿಗಳು ಹಿಮಾಲಯದಲ್ಲೇ ಹುಟ್ಟಿ ಬರುತ್ತವೆ. ಜನರ ಜೀವನಾಡಿಯಾದ ನದಿಗಳನ್ನು ಪೂಜಿಸುವ ಸಂಪ್ರದಾಯ ಬಹುಶಃ ವೇದಕಾಲದಿಂದಲೇ ಆರಂಭವಾಗಿದ್ದಿರಬೇಕು. ಋಗ್ವೇದದಲ್ಲಿ ಬರುವ 'ಸರಸ್ವತೀಸೂಕ್ತ' ದಲ್ಲಿ ಇದರ ಕುರುಹುಗಳಿವೆ. ನದಿಗಳ ಉಗಮಸ್ಥಳವನ್ನು ಪವಿತ್ರವೆಂದು ಪೂಜಿಸುವ ಕ್ರಮವೂ ಬಹುಶಃ ಅಷ್ಟೇ ಪ್ರಾಚೀನ. ಮಹಾಭಾರತದಲ್ಲಿ ಪಾಂಡವರು ಕೈಲಾಸಪರ್ವತವನ್ನು ದರ್ಶನ ಮಾಡಿದ ಕಥೆ ಬರುತ್ತದೆ. ಕಾಳಿದಾಸನ **'ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ । ಹಿಮಾಲಯೋ ನಾಮ ನಗಾಧಿರಾಜಃ'** ಎಂಬ ಹಿಮಾಲಯದ ಪ್ರಸಿದ್ಧ ವರ್ಣನೆಯಂತೂ ಅವನಿಗೆ ಹಿಮಾಲಯದ ಮೇಲಿದ್ದ ಪೂಜ್ಯಭಾವವನ್ನು ಸೂಚಿಸುತ್ತದೆ.

ಪ್ರಾದೇಶಿಕ ಸೌಂದರ್ಯ, ಪೌರಾಣಿಕ ಹಿನ್ನೆಲೆ (ಸ್ಥಳಮಹಾತ್ಮೆ) ಹಾಗೂ ಆಧ್ಯಾತ್ಮಿಕ ವಿಶೇಷತೆ – ಇವು ಮುಪ್ಪುರಿಗೊಂಡು ತೀರ್ಥಯಾತ್ರೆಯ ಮಹತ್ವವು ಇನ್ನಷ್ಟು ವೃದ್ಧಿಗೊಂಡಿದೆ. ದೈನಂದಿನ ಬದುಕಿನ ಜಂಜಾಟದ ನಡುವೆ ಒಂದು ಉಲ್ಲಾಸದ ಯಾತ್ರೆ, ಅದರೊಂದಿಗೆ ಪುಣ್ಯಪ್ರಾಪ್ತಿ, ಜೊತೆಗೆ 'ಬದಲಾವಣೆ'ಯ ಅನುಭವ ಇವು ಜನಸಾಮಾನ್ಯರ ಬದುಕಿನಲ್ಲಿ ಹೊಸಹುರುಪನ್ನು ನೀಡುತ್ತವೆ; ಯಾಂತ್ರಿಕ ಬದುಕಿನ, ಆಧುನಿಕ ಯುಗದ ಗೊಂದಲಗಳ ನಡುವೆ ಮೈ, ಮನ, ಹೃದಯಗಳಿಗೆ ಶಾಂತಿ ನೀಡುತ್ತವೆ.

### ಮಹಾತ್ಮರ ಉದಾಹರಣೆಗಳು

ನಮ್ಮ ಪರಂಪರೆಯಲ್ಲಿ ಪ್ರತಿಯೊಂದಕ್ಕೂ ಸಂತ-ಮಹಾತ್ಮರ, ಸಾಧು-ಮಹಾಪುರುಷರ ಉದಾಹರಣೆಗಳೇ ಆದರ್ಶವಾಗಿರುತ್ತವೆ. ತೀರ್ಥಯಾತ್ರೆಯ ವಿಚಾರ ಬಂದಾಗಲೂ ಈ ಮಾತು ನಿಜ. ಅನಾದಿಕಾಲದಿಂದಲೂ ಸಾಧು, ಸಂತರು ಪರಿವ್ರಾಜಕ ಜೀವನ ನಡೆಸುತ್ತ ಹಲವು ತೀರ್ಥಕ್ಷೇತ್ರಗಳ ಸಂದರ್ಶನ ಮಾಡಿ, ಅಲ್ಲಿನ ಶಾಂತ ಹಾಗೂ ಪವಿತ್ರ ಪರಿಸರದಲ್ಲಿ ತಪಸ್ಸನ್ನಾಚರಿಸಿದ ಹಲವು ಉದಾಹರಣೆಗಳು ಪುರಾತನ ಕೃತಿಗಳಲ್ಲಿ ಉಲ್ಲೇಖಗೊಂಡಿವೆ. ವ್ಯಾಸ ಮಹರ್ಷಿಗಳು ಬದರೀನಾಥದಲ್ಲಿ ತಪಸ್ಸುಮಾಡಿದರೆಂದೂ, ಅಲ್ಲೇ ಬ್ರಹ್ಮಸೂತ್ರಗಳನ್ನು ರಚಿಸಿದರೆಂದೂ, 'ಪಂಚಮವೇದ'ವೆನಿಸಿರುವ ಮಹಾಭಾರತವನ್ನೂ ಬರೆದರೆಂದೂ ಹೇಳಲಾಗಿದೆ. ಸದಾ ಬ್ರಹ್ಮಾನುಭವದಲ್ಲಿರುತ್ತಿದ್ದ ಋಷಿಮುನಿಗಳ ಗಾಢ ಧ್ಯಾನದಿಂದ ಪೂತಗೊಂಡ ಪ್ರದೇಶವೆಂದು ಇಂದಿಗೂ ಅಲ್ಲಿ ಭಕ್ತರು ಭಾವುಕರಾಗಿ ನೆನೆಯುತ್ತಾರೆ. ಅಂತೆಯೇ ಒಬ್ಬೊಬ್ಬರು ಮಹಾತ್ಮರು ಒಂದೊಂದು ಕ್ಷೇತ್ರದಲ್ಲಿ ಹಲವು ವರ್ಷಗಳ ಕಾಲ ನೆಲೆಸಿದ್ದು ತಪಸ್ಸುಮಾಡಿದ ಉದಾಹರಣೆಗಳಿವೆ. ಸಾಮಾನ್ಯವಾಗಿ ನದಿತೀರದಲ್ಲಿ ಅಥವಾ ಪರ್ವತ ಪ್ರದೇಶವಾಗಿದ್ದರೆ ಗುಹೆಯಲ್ಲಿ ಸಾಧುಗಳು ವಾಸವಾಗಿರುತ್ತಾರೆ; ತಮ್ಮ ತಪಸ್ಸು, ಧ್ಯಾನಕ್ಕೆ ಭಂಗವುಂಟಾಗದಂತೆ ಅದೇ ರೀತಿ ದೈನಂದಿನ ಅಗತ್ಯಕ್ಕೆ ಅನುಕೂಲವಾಗಿರುವಂತೆ ಒಂದು ಸುರಕ್ಷಿತ ಪ್ರದೇಶದಲ್ಲಿರುತ್ತಾರೆ. ಮುಂದೆ ಅವರ ನಿರ್ಯಾಣಾನಂತರ ಅಲ್ಲಿನ ಮಹಿಮೆ ಪ್ರಸಿದ್ಧಿಗೆ ಬಂದು ಅದೊಂದು ಪವಿತ್ರ ಸ್ಮಾರಕವೋ, ದೇವಾಲಯವೋ, ಯಾತ್ರಾಸ್ಥಳವೋ ಆಗಿ ಪರಿಣಮಿಸಿರಬಹುದು. ಮಹಾತ್ಮರ ಶಿಷ್ಯರಿಗಂತೂ ಅದೇ ಅತ್ಯಂತ ಪವಿತ್ರ ತಾಣವಾಗಿರುವುದರಿಂದ, ಅವರಲ್ಲಿ ಆ ಪ್ರದೇಶದ ಯಾತ್ರೆ ಅತ್ಯಂತ ಪವಿತ್ರಕಾರ್ಯವೆಂದೇ ತಿಳಿಯಲಾಗುವುದು. ಇದೇ ರೀತಿ, ಊರಿಂದೂರಿಗೆ ಸಂಚಾರ ಮಾಡುತ್ತಾ, ಎಲ್ಲೂ ಒಂದೆಡೆ ಹೆಚ್ಚುಕಾಲ ವಾಸಮಾಡದ ಪರಿವ್ರಾಜಕ ಸಂನ್ಯಾಸಿಗಳೂ ಹಲವು ತೀರ್ಥಕ್ಷೇತ್ರಗಳ ಸಂದರ್ಶನ ಮಾಡುತ್ತಾ, ಅಲ್ಲಿನ ದೇವದೇವತೆಗಳ ದರ್ಶನ ಮಾಡಿ, ಸ್ತುತಿ ಮಾಡಿರುವ ಉದಾಹರಣೆಗಳಿವೆ. ಶ್ರೀಶಂಕರರು ಭಾರತದಾದ್ಯಂತ ಸಂಚಾರ ಮಾಡಿ ನಾನಾಕ್ಷೇತ್ರಗಳ ಅಧಿದೇವತೆಗಳನ್ನು ಕುರಿತು ನೂರಾರು ಸ್ತೋತ್ರರಚನೆ ಮಾಡಿ ಸ್ತುತಿಸಿದ್ದಾರೆ. ಅದೇ ರೀತಿ ದಕ್ಷಿಣದ ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರಾದ ಶ್ರೀಮುತ್ತುಸ್ವಾಮಿ ದೀಕ್ಷಿತರು ನಮ್ಮ ದೇಶದ (ಉತ್ತರ ಭಾರತವೂ ಸೇರಿದಂತೆ) ಹಲವು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ಆಯಾ ದೇವದೇವತೆಗಳ ಮೇಲೆ ಸಂಗೀತ ಕೃತಿರಚನೆ ಮಾಡಿ ಸ್ತುತಿಸಿದ್ದಾರೆ. ಇಂದಿಗೂ ಇಂಥ ಮಹಾಪುರುಷರ ಸ್ತೋತ್ರಸಾಹಿತ್ಯರಾಶಿ ಜನಸಾಮಾನ್ಯರ ನಾಲಿಗೆಯಲ್ಲಿ ನಲಿದಾಡುತ್ತಿದೆ. ಇವು ಕೇವಲ ಸ್ತುತಿಗಳಲ್ಲ; ಮಹಾಪುರುಷರು ದಿವ್ಯ ಪ್ರದೇಶಗಳಲ್ಲಿ ಪಡೆದ ದಿವ್ಯಾನುಭವಗಳು ಪಡೆದ ಶಬ್ದರೂಪ. ಆದ್ದರಿಂದಲೇ ಈ ವಿಶಿಷ್ಟ ಸಾಹಿತ್ಯವನ್ನು ಓದಿದವರ ಹೃದಯದಲ್ಲಿ ಆ ಪುಣ್ಯಕ್ಷೇತ್ರವನ್ನು ಸಂದರ್ಶಿಸಿದ ಪ್ರೇರಣೆ ಮೂಡಿಬರುತ್ತದೆ.

ಪ್ರಾಚೀನಕಾಲದಲ್ಲಿ ಹೇಗೋ, ಹಾಗೆ ಈಚಿನ ಸಾಧುಸಂತರೂ ತೀರ್ಥಯಾತ್ರೆ ಮಾಡಿದ ಅನೇಕ ಉದಾಹರಣೆಗಳಿವೆ. ಚೈತನ್ಯ ಮಹಾಪ್ರಭು ಪುರೀಕ್ಷೇತ್ರ, ವೃಂದಾವನಗಳಲ್ಲದೆ ದಕ್ಷಿಣದ ಹಲವು ತೀರ್ಥಕ್ಷೇತ್ರಗಳ ಸಂದರ್ಶನ ಮಾಡಿದರು. ಶ್ರೀರಾಮಕೃಷ್ಣರು ತಮ್ಮ ಜೀವನದ ಬಹುಪಾಲನ್ನು ಕಲ್ಕತ್ತಾದಲ್ಲೇ ಕಳೆದರೂ, ಅಲ್ಲಿನ ಅನೇಕ ದೇವಾಲಯ, ಮಂದಿರಗಳಿಗೆ ಭೇಟಿಕೊಟ್ಟಿದ್ದರು. ಒಂದು ಬಾರಿ ದೇವಘರ್, ಕಾಶಿ, ವೃಂದಾವನ ಯಾತ್ರೆಯನ್ನೂ ಕೈಗೊಂಡಿದ್ದರು. ಅಂತೆಯೇ, ಶ್ರೀಮಾತೆ ಶಾರದಾದೇವಿಯವರು ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಕಾಶಿ, ವೃಂದಾವನ, ಹರಿದ್ವಾರ, ಜೈಪುರ ಮೊದಲಾದ ಪ್ರದೇಶಗಳಿಗೂ, ಮುಂದೆ ಪುರೀಕ್ಷೇತ್ರ, ರಾಮೇಶ್ವರ ಮೊದಲಾದ ದಕ್ಷಿಣದ ಭಾಗಗಳಿಗೂ ಯಾತ್ರೆ ಹೋಗಿದ್ದರು. ಶ್ರೀರಾಮಕೃಷ್ಣರ ನೇರ ಶಿಷ್ಯರುಗಳಂತೂ ಹಲವು ದಿಕ್ಕಗಳಲ್ಲಿ ಸಂಚರಿಸಿ, ಅನೇಕ ತೀರ್ಥಕ್ಷೇತ್ರಗಳ ಸಂದರ್ಶನ ಮಾಡಿದರು, ಹಲವೆಡೆ ಹಲವು ದಿನ ವಾಸವಾಗಿದ್ದು ತಪಸ್ಸನ್ನಾಚರಿಸಿದರು.

ತೀರ್ಥಯಾತ್ರೆಯ ವಿಚಾರ ಬಂದಾಗ ಸ್ವಾಮಿ ವಿವೇಕಾನಂದರನ್ನು ಮರೆಯುವುದುಂಟೆ? ಅವರ ಜೀವಿತಾವಧಿ ಅಲ್ಪಕಾಲವಾಗಿದ್ದರೂ, ಕೆಲವೇ ವರ್ಷಗಳ ಅವಧಿಯಲ್ಲಿ ಅವರು ಸುತ್ತಾಡಿದ, ಓಡಾಡಿದ ಪ್ರದೇಶಗಳ ವ್ಯಾಪ್ತಿ ಅತಿವಿಶಾಲ. ಅವರು ಭೇಟಿ ನೀಡಿದ ಪ್ರದೇಶಗಳು ಎಲ್ಲೆಲ್ಲಿ, ದರ್ಶನ ಮಾಡಿದ ತೀರ್ಥಕ್ಷೇತ್ರಗಳು ಯಾವುವು – ಇವನ್ನೆಲ್ಲ ಬಹುತೇಕ ದಾಖಲಿಸಿದ್ದರೂ, ಅವರ ಪರಿವ್ರಾಜಕ ದಿನಗಳ (ಅಂದರೆ ಅಮೆರಿಕಾಗೆ ಹೊರಡುವುದಕ್ಕೆ ಮೊದಲಿನ) ವಿವರಗಳೆಲ್ಲ ಸಂಪೂರ್ಣ ಲಭ್ಯವಿಲ್ಲ. ಆದರೂ ಲಭ್ಯವಿರುವ ಮಾಹಿತಿಯ ಪ್ರಕಾರ ಅವರು ಸಂದರ್ಶಿಸಿದ ಪ್ರದೇಶಗಳೂ ಕಡಮೆಯೇನಿಲ್ಲ. ಸ್ವಾಮಿ ಅಖಂಡಾನಂದರೊಡನೆ ಹಿಮಾಲಯದಲ್ಲಿ, ಅನಂತರ ಮಧ್ಯ ಭಾರತ, ಪಶ್ಚಿಮ ಭಾರತದಲ್ಲಿ, ಮುಂದೆ ದಕ್ಷಿಣ ಭಾರತದಲ್ಲಿ ಅವರು ಪರ್ಯಟನೆ ಮಾಡಿ ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ದಕ್ಷಿಣದ ತುತ್ತತುದಿ ಕನ್ಯಾಕುಮಾರಿಯಿಂದ ಹಿಡಿದು, ಉತ್ತರದಲ್ಲಿ ಕಾಶ್ಮೀರದ ಕ್ಷೀರಭವಾನಿಯವರೆಗೆ ಸುತ್ತಾಡಿ ಅವರು ಪಡೆದ ದಿವ್ಯಾನುಭವಗಳು ಅಸಾಧಾರಣ. ಕಾಶ್ಮೀರದ ಅಮರನಾಥ ಲಿಂಗದ ದರ್ಶನ ಮಾಡುವಾಗ ಅವರೊಂದಿಗೆ ಸೋದರಿ ನಿವೇದಿತಾ ಹಾಗೂ ಇನ್ನಿತರ ಶಿಷ್ಯಂದಿರೂ ಇದ್ದರು. ಅಲ್ಲಿ ಸ್ವಾಮೀಜಿ ಪಡೆದ ದಿವ್ಯ ದರ್ಶನ, ಅವರ ಅಲೌಕಿಕ ಮನಸ್ಥಿತಿ ಇವನ್ನೆಲ್ಲ ನಿವೇದಿತಾ ತನ್ನ '**ನಾ ಕಂಡಂತೆ ನನ್ನ ಗುರುದೇವ**' ಗ್ರಂಥದಲ್ಲಿ ದಾಖಲಿಸಿದ್ದಾಳೆ.

ಮಹಾಪುರುಷರು ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದರಿಂದ ಅವರಿಗಷ್ಟೇ ಆಧ್ಯಾತ್ಮಿಕ ಲಾಭ, ಪುಣ್ಯ, ಶಾಂತಿ ಲಭಿಸುವುದಿಲ್ಲ; ಅವರು ತಮ್ಮ ಅಂತರಂಗದಲ್ಲಿರುವ ಆಧ್ಯಾತ್ಮಿಕ ಶಕ್ತಿಯನ್ನು ಆ ಕ್ಷೇತ್ರದಲ್ಲೂ ಹರಿಸಿ, ಅಲ್ಲಿನ ದಿವ್ಯತೆಗೆ ನೂತನ ಸಂಚಾರ ಮಾಡುವರು, ಹೊಸ ಶಕ್ತಿ ನೀಡುವರು ಎನ್ನುತ್ತಾರೆ. ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರೇ ಮೊದಲಾದವರ ಮೂಲಕ ಈ ಮಾತು ಸತ್ಯವೆನಿಸಿದೆ. '**ತೀರ್ಥೀಕುರ್ವಂತಿ ತೀರ್ಥಾನಿ**' (ಅಂದರೆ, 'ಮಹಾತ್ಮರು ತೀರ್ಥಸ್ಥಳಗಳಿಗೆ ಸಂದರ್ಶನ ನೀಡುವ ಮೂಲಕ ಆ ಪ್ರದೇಶಗಳನ್ನು ಇನ್ನಷ್ಟು ಪವಿತ್ರ ಸ್ಥಳವನ್ನಾಗಿ ಮಾಡುತ್ತಾರೆ') ಎಂಬ ಮಾತಿನ ಅರ್ಥ ಇದೇ ಆಗಿದೆ. ಜಗತ್ತಿನ ಯಾವ ಮೂಲೆಯಲ್ಲೇ ಇರಲಿ, ಸಾಧು, ಸಂತ, ಪ್ರವಾದಿಗಳು ಇದ್ದ ಸ್ಥಳ, ನಡೆದಾಡಿದ ನೆಲ, ಸಾಧನೆ ಮಾಡಿದ ಪ್ರದೇಶ ಪವಿತ್ರವೂ, ಪಾವನವೂ, ಯಾತ್ರಾಸ್ಥಳವೂ ಆಗಿರುವುದಕ್ಕೆ ಇದೇ ಕಾರಣ. ಆ ಪ್ರದೇಶದೊಂದಿಗೆ ಅಂಥ ಮಹಾಪುರುಷರ ನೆನಪುಗಳೇಳುತ್ತವೆ, ಅವರ ಜೀವನದ ಕ್ಷಣಗಳು ಮತ್ತೆ ಜೀವಂತವಾಗುತ್ತವೆ. ಈ ಮೂಲಕ ತೀರ್ಥಕ್ಷೇತ್ರಗಳು ಒಂದು ಮಾಧ್ಯಮವಾಗುತ್ತವೆ.

## ಆಧ್ಯಾತ್ಮಿಕ ಮಹತ್ವ

ಅನೇಕ ಸ್ಥಳಪುರಾಣಗಳಲ್ಲಿ ಆಯಾ ಕ್ಷೇತ್ರಗಳ ಮಹತ್ವವನ್ನು ಹೇಳುತ್ತಾ 'ಈ ಕ್ಷೇತ್ರದ ದರ್ಶನ ಮಾಡಿದವರ ಎಲ್ಲ ಪಾಪಗಳೂ ಪರಿಹಾರವಾಗುತ್ತವೆ', 'ಇಂಥ ಸ್ಥಳದಲ್ಲಿ ಮಿಂದರೆ ಮೋಕ್ಷಪ್ರಾಪ್ತಿಯಾಗುತ್ತದೆ' ಎಂದೆಲ್ಲ ಅಲ್ಲಿನ ಮಹಾತ್ಮೆಯನ್ನು ಸಾರಲಾಗಿದೆ. ಅದೆಲ್ಲ ನಿಜವೆ? ನಿಜಕ್ಕೂ ಪಾಪ ಪರಿಹಾರವಾಗುವುದೇ? ಅಷ್ಟು ಸುಲಭವಾಗಿ ಒಬ್ಬಾತ ತನ್ನೆಲ್ಲ ದೋಷಗಳನ್ನು ಕಳೆದುಕೊಳ್ಳುವುದು ಸಾಧ್ಯವಾಗಿದ್ದರೆ, ಜಗತ್ತು ಇನ್ನೂ ಏಕೆ ಇಷ್ಟೊಂದು ಕೆಡುಕುಗಳಿಂದ ತುಂಬಿದೆ ? – ಈ ಪ್ರಶ್ನೆಗಳು ಇಲ್ಲಿ ಏಳಬಹುದು. ಬುದ್ಧ, ನಾನಕ್, ಶ್ರೀರಾಮಕೃಷ್ಣರೇ ಮೊದಲಾದವರು ಇಂಥ ಪ್ರಶ್ನೆಗಳಿಗೆ ವಾಸ್ತವಿಕ ದೃಷ್ಟಿಯಿಂದ ಉತ್ತರ ನೀಡುತ್ತಾರೆ. ಮನಸ್ಸು, ಹೃದಯ ಶುದ್ಧಿಯಾಗದೆ ಒಬ್ಬ ವ್ಯಕ್ತಿ ಎಷ್ಟೇ ತೀರ್ಥಯತ್ರೆ ಮಾಡಲಿ, ಅದರಿಂದ ಫಲವಿಲ್ಲ ಎನ್ನುತ್ತಾರೆ. 'ಸಾಧುವಿನ ಕಮಂಡಲು ನಾಲ್ಕೂ ಧಾಮಗಳಿಗೆ ಹೋಗುತ್ತದೆ. ಆದರೆ ಅದಕ್ಕೆ ಮುಕ್ತಿ ದೊರಕುವುದೆ? ಯಾರ ಹೃದಯ ಪರಿಶುದ್ಧವೋ, ಯಾರು ಕಾಮನೆಗಳಿಂದ ಮುಕ್ತನೋ ಅವನಿಗೆ ಮಾತ್ರ ಮುಕ್ತಿ ದೊರಕುವುದು' ಎನ್ನುತ್ತಾರೆ ಶ್ರೀರಾಮಕೃಷ್ಣರು.

'ಚಿತ್ತವಿಲ್ಲದೆ ಗುಡಿಯ ಸುತ್ತಿದರೆ ಫಲವೇನು?' ಎಂದು ಸರ್ವಜ್ಞನ ವಚನವೊಂದಿದೆ. ತೀರ್ಥಕ್ಷೇತ್ರದ ಪ್ರಧಾನ ಉದ್ದೇಶ, ಅಲ್ಲಿ ಗುಡಿಯೊಳಗಿನ ಭಗವಂತನ ದರ್ಶನವೇ ಹೊರತು, ಮನಸ್ಸು ಇನ್ನೆಲ್ಲೋ ಬಾಹ್ಯವಸ್ತುಗಳಲ್ಲಿ ನೆಟ್ಟು ಯಾಂತ್ರಿಕವಾಗಿ ಯಾತ್ರೆ, ದೇವಾಲಯ ದರ್ಶನ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ ; ತನ್ನ ಅಂತರಂಗದಲ್ಲಿ ಕಾಣುವ ದೇವನನ್ನು ಬಾಹ್ಯದಲ್ಲಿರುವ ಗುಡಿಯಲ್ಲೂ ಕಾಣಬೇಕು. ಗುಡಿಯಲ್ಲಿ, ಕಲ್ಲಿನ ವಿಗ್ರಹದಲ್ಲಿ ತನ್ನ ಒಳಗಿರುವ ದೇವನನ್ನೇ ಕಾಣಬೇಕು. ಆಗ ಮಾತ್ರ ಯಾತ್ರೆ, ದೇಗುಲ ದರ್ಶನ ಸಾರ್ಥಕವಾಗುವುದು. ನಮ್ಮ ಆಂತರಿಕ ಭಾವನೆಯನ್ನು ಬಾಹ್ಯಮೂರ್ತಿಯಲ್ಲಿ ಸಾಕಾರರೂಪದಲ್ಲಿ ಕಾಣಬೇಕು. ಇಲ್ಲಿ ಮನಸ್ಸು, ಭಾವನೆ, ಭಕ್ತಿ ಮುಖ್ಯ. ಸರ್ವವ್ಯಾಪಿಯಾದ, ಸರ್ವಾಂತರ್ಯಾಮಿಯಾದ ಭಗವಂತನನ್ನು ತನ್ನೊಳಗೂ ಹೊರಗೂ ಕಾಣುವುದು ಈ ಎಲ್ಲ ತೀರ್ಥಯಾತ್ರೆಯಲ್ಲಿರಬೇಕಾದ ಪ್ರಧಾನ ಅಂಶ. ತೀರ್ಥಕ್ಷೇತ್ರಗಳಲ್ಲಿ ಭಗವಂತನ ಸಾನ್ನಿಧ್ಯ ಹೆಚ್ಚಾಗಿ ಅನುಭಾವಕ್ಕೆ ಬರುತ್ತದೆ ಎನ್ನುತ್ತಾರೆ. ಇದನ್ನು ಒಪ್ಪದವರು ಹಲವರಿದ್ದಾರೆ. ಆದರೆ ಇದು ಕೂಡ ಭಕ್ತನ ವಿಶ್ವಾಸ, ಭಾವನೆಯನ್ನು ಅವಲಂಬಿಸಿದೆ. ಅನೇಕ ಮಂದಿ ಶ್ರದ್ಧಾಳುಗಳು ತಮ್ಮ ಒಮ್ಮುಖವಾದ ಭಕ್ತಿ, ಭಾವನೆ, ಪ್ರಾರ್ಥನೆಗಳನ್ನು ಒಂದು ದೇವತಾವಿಗ್ರಹದ ಮೇಲೆ ಒಂದೆಡೆ ಹರಿಸಿದರೆ, ಅವರ ಮಾನಸಿಕ ಏಕಾಗ್ರತೆಯ ತರಂಗಗಳು ಅಲ್ಲಿ ಒಂದು ಶಕ್ತಿಯಾಗಿ ಅನುರಣಿಸಲಾರದೆ? ಈ ಕಾರಣದಿಂದಲೇ, ದೇಗುಲಗಳಲ್ಲಿ ಹಾಗೂ ತೀರ್ಥಕ್ಷೇತ್ರದಲ್ಲಿ ವಿಶೇಷ ಆಧ್ಯಾತ್ಮಿಕ ತರಂಗ ಸದಾ ಅನುರಣಿಸುತ್ತಿದೆ ಎನ್ನುತ್ತಾರೆ. ಈ ತತ್ತ್ವವನ್ನು ಶ್ರೀರಾಮಕೃಷ್ಣರು ಒಪ್ಪುತ್ತಿದ್ದರು. ಎಲ್ಲಿ ಅನೇಕ ಮಂದಿ ಸೇರಿ ಭಗವಂತನ ಚಿಂತನೆ ನಡೆಸುವರೋ, ಅಲ್ಲಿ ಭಗವಂತನ ಶಕ್ತಿ ವಿಶೇಷರೂಪದಿಂದ ವ್ಯಕ್ತವಾಗುವುದು ಎಂದು ಅವರು ಹೇಳುತ್ತಿದ್ದರು. ಆದರೆ ಶ್ರದ್ಧೆ, ಭಕ್ತಿ, ವಿಶ್ವಾಸ ಇವುಗಳು ಮುಖ್ಯ; ಅವುಗಳಿಂದ ಮಾತ್ರವೇ ತೀರ್ಥಯಾತ್ರೆ ಸಫಲವಾಗುವುದು.

## ಆಧುನಿಕ ಜೀವನದಲ್ಲಿ

ಇತ್ತೀಚೆಗೆ ಪ್ರತಿಯೊಂದನ್ನೂ ವ್ಯವಹಾರದ ದೃಷ್ಟಿಯಿಂದ ನೋಡುತ್ತಿದ್ದೇವೆ. ದೇವಾಲಯಗಳು, ತೀರ್ಥಕ್ಷೇತ್ರಗಳ ಪ್ರವಾಸಿಗರ, ಯಾತ್ರಿಕರ ಆಕರ್ಷಣೆಯ ಕೇಂದ್ರಗಳಾಗುತ್ತಿವೆ. ಯಾತ್ರಿಕರ ಅನು